
ಕಾನನ
MAY 2012
ನಿಸರ್ಗದೆಡೆಗೆ ಪಯಣ
© WCG
WCG
WILDLIFE
CONSERVATION
GROUP



MAY 2012

# ಕಾನನ

ನಿಸರ್ಗದೆಡೆಗೆ ಪಯಣ

ಲೇಖನಗಳು


* ಹಕ್ಕಿಲೋಕ - ಅಶ್ವಥ.ಕೆ.ಎನ್
* ಸಂಗೀತಗಾರ ಸಿಕಾಡ -.ಶಂಕರಪ್ಪ. ಕೆ.ಪಿ
* ಬುಗರಿಕಲ್ - ನಾಗೇಶ್ ಓ.ಎಸ್
* ವಿದ್ಯಾರ್ಥಿಗಾಗಿ ವಿಜ್ಞಾನ - ಮುರಳಿ.ಎಸ್


ಅನಿಸಿಕೆ

E-mail: kaanana.mag@gmail.com

ಮುಖಪುಟ: ಕೃಷ್ಣಮೃಗ

© WCG

# ಸಂಪಾದಕೀಯ

World Migratory Bird Day



"**ಭೂ** ಖಂಡಗಳನ್ನೇ ದಾಟಿ ವಲಸೆ ಹೋಗುವ ಹಕ್ಕಿಗಳ ಜೀವನ ಬಹಳ ವಿಸ್ಮಯಕಾರಿ. ಋತುಗಳ ಬದಲಾವಣೆಗೆ ತಕ್ಕಂತೆ ಸಂತಾನೋತ್ಪತ್ತಿಗಾಗಿ, ಸರಿಯಾದ ವಾತಾವರಣವನ್ನು ಹುಡುಕಿಕೊಂಡು ಸಾವಿರಾರು ಕಿ.ಮೀ ಸಮುದ್ರಗಳನ್ನೇ ಹಗಲು ರಾತ್ರಿ ನಿರಂತರವಾಗಿ ಹಾರಿ ದಾಟಿ ಬರುತ್ತವೆ. ರಾತ್ರಿಯ ಕತ್ತಲಲ್ಲಿ ದಿಕ್ಕುತಪ್ಪದೆ ಸಮುದ್ರಯಾನ ಮಾಡಲು ಸಹಾಯ ಮಾಡುವ ಆ ಪುಟ್ಟ ಹಕ್ಕಿಯ ಮೆದುಳು ಸೂಪರ್ ಕಂಪ್ಯೂಟರ್ರೇ ಸರಿ. ಹೆಚ್ಚುತ್ತಿರುವ ಭೂಮಿಯ ತಾಪಮಾನ, ಹಾಳಾಗುತ್ತಿರುವ ಪೋಷಣಾನೆಲೆ ಹಾಗೂ ಆವಾಸ ನಾಶದಿಂದಾಗಿ ಹಕ್ಕಿಗಳ ಬದುಕಿಗೆ ಇಂದು ಸಂಚಕಾರ ಬಂದು ಒದಗಿದೆ. ಬೆಳೆಯುತ್ತಿರುವ ಭೂಮಿಯ ಜನಸಂಖ್ಯೆಗೆ ಆಹಾರವನ್ನು ಒದಗಿಸಲು ಪಕ್ಷಿಗಳ ವಾಸ ಸ್ಥಾನಗಳಾದ ಹುಲ್ಲುಗಾವಲು,ಜೌಗು ಪ್ರದೇಶ,ಕೆರೆ ಹಾಗೂ ಕಾಡುಗಳೇ ಮುಂತಾದ ಆವಾಸಗಳನ್ನು ನಾಶಮಾಡಿ, ನಾವು ಆ ಜಾಗಗಳಲ್ಲಿ ದವಸ ಧಾನ್ಯಗಳನ್ನು ಬೆಳೆಯುತ್ತಿದ್ದೇವೆ. ಇದರಿಂದಾಗಿ ಮಿಲಿಯಂತರ ವರ್ಷಗಳಿಂದ ವಲಸೆ ಬಂದು ತನ್ನ ಮರಿಗಳನ್ನು ಪೋಷಿಸಿ ಬೆಳೆಸುತ್ತಿದ್ದ ಪೋಷಣಾನೆಲೆಗಳು ಈಗ ಇಲ್ಲದಂತಾಗಿದೆ. ಇದೆಲ್ಲದಕ್ಕೂ ಮಾನವನೇ ಕಾರಣನಾಗಿರುವುದರಿಂದ ಈ ನೆಲೆಗಳ ರಕ್ಷಣೆ ಮಾನವನಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ನಾವೆಲ್ಲರೂ ಇಂದೇ ಎಚ್ಚೆತ್ತು ಪರಿಸರ ರಕ್ಷಣೆ ಮಾಡುವಂತಾಗಲಿ.

ಈ ಸಂಚಿಕೆಯಲ್ಲಿ ***ಕೊಂಬಿನ ಗೂಬೆ***ಯ ಚಲನವಲನ, ಆವಾಸ ಹಾಗೂ ನಡವಳಿಕೆಗಳನ್ನು ಕುರಿತು ಅಶ್ವಥರವರು ಹಕ್ಕಿ ಲೋಕದಲ್ಲಿ ಸ್ವಾರಸ್ಯಕರವಾಗಿ ಬರೆದಿದ್ದಾರೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿರುವ *ಬುಗುರಿಕಲ್ಲು* ಬೆಟ್ಟಕ್ಕೆ ಪ್ರವಾಸ ಮಾಡಿದ ಬಗ್ಗೆ ಹಾಗೂ ಅಲ್ಲಿ ಅವರು ಕಂಡ ಕಾಟಿಗಳ ಹಿಂಡಿನ ಬಗ್ಗೆ ನಮ್ಮೊಂದಿಗೆ ನಾಗೇಶ್ ರವರು ಹಂಚಿಕೊಂಡಿದ್ದಾರೆ.



ಮುಂಗಾರಿನಲ್ಲಿ ಕಾಣಿಸಿಕೊಳ್ಳುವ ಸಿಕಾಡ ಎಂಬ ಕೀಟದ ಜೀವನಶೈಲಿಯ ಬಗ್ಗೆ ಶಂಕರಪ್ಪರವರು ಸವಿವರವಾಗಿ ***ಸಂಗೀತಗಾರ ಕೀಟ ಸಿಕಾಡ***ದಲ್ಲಿ ವರ್ಣಿಸಿದ್ದಾರೆ ಹಾಗೂ ವಿ ವಿ ಅಂಕಣದಲ್ಲಿ ಶ್ರೀ ಮುರಳಿಯವರು ಸಮುದ್ರದಲ್ಲಿ ***ರಂಗೋಲಿ ಹುಳ***ಗಳ_ ಕೀಟಸಂಖ್ಯಾಸ್ಫೋಟದ ಬಗ್ಗೆ ಚಿತ್ರಿಸಿದ್ದಾರೆ.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ,ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ–ಮೇಲ್ ವಿಳಾಸ kaanana.mag@gmail.com

**Wildlife Conservation Group**

# ಹಕ್ಕಿ ಲೋಕ

## ಬೈನಾಕ್ಯುಲರ್ ಕ್ಯಾಮರಾ ಮತ್ತು ಕೊಂಬಿನ ಗೂಬೆ

ವೈಜ್ಞಾನಿಕ ಹೆಸರು: *Bubo bubo*

ಇಂಗ್ಲೀಷ್ ಹೆಸರು : **Eurasion Eagle-Owl**





ಅದು ನವೆಂಬರ್ ತಿಂಗಳು, ಸುಮಾರು ಹತ್ತು ವರ್ಷಗಳ ಹಿಂದಿನ ಮಾತು, ನನಗೆ ವೈಲ್ಡ್ ಲೈಫ್ ಫೋಟೋಗ್ರಾಫಿ ಮಾಡುವ ಹುಚ್ಚು ಇದ್ದರೂ ನನ್ನ ಬಳಿ ಅದಕ್ಕೆ ತಕ್ಕ ಕ್ಯಾಮೆರ ಇಲ್ಲದೆ ಇದ್ದದ್ದು ಅಂದಿಗೆ ಬೇಸರದ ಸಂಗತಿ. ಪ್ಯಾನೊಸಾನಿಕ್ ಕಂಪನಿಯ ಸ್ಟಿಲ್ ಕ್ಯಾಮೆರ ಇತ್ತು. ಅದೇ ನನ್ನ ಪಾಲಿಗೆ ವೈಲ್ಡ್ ಲೈಫ್ ಗೆ ಬೇಕಾದ ದೊಡ್ಡ ಕ್ಯಾಮೆರ, ಅದರಲ್ಲಿಯೇ ವೈಲ್ಡ್ ಲೈಫ್ ಫೋಟೋಗ್ರಾಫಿ ಮಾಡುತ್ತಿದ್ದೆ. ಆ ಸಣ್ಣ ಕ್ಯಾಮೆರ ತೆಗೆದುಕೊಂಡು ಹಕ್ಕಿಗಳ ಸಮೀಪಕ್ಕೆ ಹೋಗಬೇಕಿತ್ತು. ಹಕ್ಕಿಗಳು ಇರುತ್ತವೆಯೇ? ಹಾರಿಹೋಗುತ್ತಿದ್ದವು. ನನ್ನ ಮನಸ್ಸಿನಲ್ಲಿ ಮೂಡುವ ಚಿತ್ರದಂತೆ ಬರುತಿರುತ್ತಿಲ್ಲ, ತುಂಬ ಬೇಸರದಿಂದ ವಾಪಸ್ ಬರುತ್ತಿದ್ದೆ.




ಅಂದಿಗೆ ನನ್ನ ಬಳಿ ಅಪೋಲೋ ಕಂಪನಿಯ 8x30 ಲೆನ್ಸ್ ನ ಬೈನಾಕ್ಯುಲರ್ ಇತ್ತು. ನನ್ನ ಬಳಿ ಇದ್ದ ಸಣ್ಣ ಸ್ಟಿಲ್ ಕ್ಯಾಮೆರಕ್ಕೆ ಈ ಬೈನಾಕ್ಯುಲರ್ ಅನ್ನು ಜೋಡಿಸಿ ಬೈನಾಕ್ಯುಲರ್ನ ಮೂಲಕ ಫೋಕಸ್ ಮಾಡಿ ದೂರದಿಂದಲೇ ಹಕ್ಕಿಗಳ ಕ್ಲೋಸಪ್ ಫೋಟೋ ತೆಗೆಯುತ್ತಿದ್ದೆ.

ಏನು ಸುಮಾರು ಹತ್ತು ಹದಿನೈದು ಫೋಟೋ ತೆಗೆದಿರಬಹುದು, ಆದರೆ ಇದರಿಂದ ನನಗೆ ತುಂಬಾ ಸಂತೋಷವೇ ಆಗುತ್ತಿತ್ತು . ಈ ಬೈನಾಕ್ಯೂಲರ್-ಕ್ಯಾಮರಾದಿಂದ ಫೋಟೋಗ್ರಪಿ ಮಾಡುತ್ತಿರಬೇಕಾದರೆ ಕಳ್ಳಿಗುಟ್ಟೆ ಬಂಡೆಯ ಮೇಲೆ ಸೊಳ್ಳೆಪುರದೊಡ್ಡಿಯ ದನಕಾಯೋ ಐಕಳು ಜೋರಾಗಿ ಗಲಾಟೆ ಮಾಡುತ್ತಿದ್ದರು.




"ಥೂ ಇವ್ರ್ ಮನೇಕಾಯೋಗ ಗಲಾಟೆ ಮಾಡಿ ಹಕ್ಕಿಗಳನ್ನ ಓಡಿಸ್ತಾರೆ. " ಎಂದು ಮನಸ್ಸಿನಲ್ಲೇ ಬೈಯುತ್ತಾ ಅವರ ಬಳಿ ಬಂದೆ. ನೋಡುತ್ತೇನೆ ರಾಕ್ಷಸನಂತಹ ಹಳದಿ ಕಣ್ಣುಗಳುಳ್ಳ ಕೊಂಬಿನ ಗೂಬೆಗೆ ಕಲ್ಲುಗಳಿಂದ ಹೊಡೆದು ಕುಣಿದಾಡುತ್ತಿದ್ದರು. ಕೊಂಬಿನ ಗೂಬೆಯನ್ನು ಇಂಗ್ಲೀಷಿನಲ್ಲಿ Eurasian Eagle-Owl ಎಂದು ಕರೆಯುವುದುಂಟು.

ಇದು ಮರಿ ಮಾಡಿ ಸುಮಾರು ಹದಿನೈದು ದಿನಗಳಾಗಿರಬೇಕು ಇನ್ನೂ ಸಣ್ಣ ಮರಿ. ಹದ್ದಿನ ಗಾತ್ರದ ಕಡು ಬೂದು ಬಣ್ಣದ ಹಕ್ಕಿ, ಮರಿ ದೊಡ್ಡದಾದಂತೆ ತಲೆಯ ಮೇಲೆ ಕೊಂಬಿನ ಮಾದರಿಯಲ್ಲಿ ಕಡು ಕಂದು ಪುಕ್ಕಗಳಿಂದ ಕೊಂಬುಗಳು ಹುಟ್ಟುತ್ತವೆ. ಮುಖ ಮಾಸಲು ಬಿಳಿ ಅಂಚುಗಳಿಂದ ಕೂಡಿದ್ದು ಬಾಗಿದ ಚೂಪಾದ ಕೊಕ್ಕು ಇಲಿ-ಹೆಗ್ಗಣಗಳನ್ನು ಬಗೆದು ತಿನ್ನಲು ಬಲು ಉಪಯೋಗಿ, ಕೊಕ್ಕಿನ ಎರಡೂಕಡೆ ಮೀಸೆಯಂತೆ ಬಿಳಿಗೆರೆ ಉಬ್ಬುಗಳು ಇದೆ. ಎದೆ, ಹೊಟ್ಟೆಯ ಭಾಗಗಳು ತಿಳಿ ಕಂದು ಬಣ್ಣದಿಂದ ಕೂಡಿದ್ದು ಪುಕ್ಕಗಳಿರುವ ಬಲಿಷ್ಠವಾದ ಕಾಲುಗಳು ಬೇಟೆಯನ್ನು ಬಲವಾಗಿ ಹಿಡಿಯಲು ಬಲು ಸೂಕ್ತ.

ಈ ಐಕಳ ಕಲ್ಲು ಏಟುಗಳಿಗೆ ಯಾವುದೋ ಬೂತ ರಾಕ್ಷಸನ ಮರಿಯಂತೆ ಆ ಹಳದಿ ದಪ್ಪ ದಪ್ಪನೆಯ ಕಣ್ಣುಗಳನ್ನು ಬಿಟ್ಟು ಗುಸ್ ಗುಸ್ ಎಂದು ಮೈಯನ್ನು ನಿಮಿರಿಸಿ ದನಕಾಯೋ ಐಕಳಿಗೆ ಎದರಿಸುವಂತೆ ನಟನೆ ಮಾಡುವ ಮೂಲಕ ಜೀವವನ್ನು ಉಳಿಸಿಕೊಳ್ಳಲು ಪರದಾಡುತ್ತಿತ್ತು.

“ಏ ಬಿಡ್ರೋ ಅತ್ತ, ಮಡಾಕೆ ಕೆಲ್ಸ ಇಲ್ವಾ ನಿಮ್ಗೆ, ಬಿಡಿ” ಎಂದು ಬೆದರಿಸಿದೆ, ನನ್ನ ಬಳಿಯಿದ್ದ ಸ್ಟಿಲ್ ಕ್ಯಾಮೆರದಿಂದ ಒಂದೆರಡು ಫೋಟೋಗಳನ್ನು ತೆಗೆದೆ ಆ ಫೋಟೋಗಳನ್ನು ಇಂದಿಗೂ ನೋಡಿದವರು “ಏನಿದು ಒಳ್ಳೆ ರಾಕ್ಷಸ ಮರಿ ಇದ್ದಂಗದೆ”
“ಎಂತ್ರು ಮರಿ ಇದು” ಎಂದು ಸ್ವಲ್ಪ ಗಾಬರಿತಗೊಂತಾರೆ ಬಿಡಿ.

ಸಾಮಾನ್ಯವಾಗಿ ಇದರ ಆವಾಸಗಳು ಬಂಡೆ ಪ್ರದೇಶಗಳು, ತುಂಬಾ ಹಳೆಯದಾದ ಕಟ್ಟಡಗಳು, ಬೃಹತ್ತಾದ ಮರಗಳು. ಸಂಜೆ ಅಥವಾ ರಾತ್ರಿಯ ವೇಳೆ ಬುಬೂ. . . ಬುಬೂ. . . ಬುಬೂ. . . ಎಂದು ಕೂಗುತ್ತವೆ. ನವೆಂಬರ್ ತಿಂಗಳಿಂದ ಏಪ್ರಿಲ್ ತಿಂಗಳಲ್ಲಿ ಮರದ ಪೊಟರೆಗಳಲ್ಲಿ ಅಥವಾ ಕಲ್ಲುಸಂಧಿಗಳಲ್ಲಿ ಮೂರು-ನಾಲ್ಕು ಕೆನೆ ವರ್ಣದ ಮೊಟ್ಟೆಗಳಿಗೆ ಸುಮಾರು ಮೂವತ್ತೈದು ದಿನಗಳವರೆಗೆ ಕಾವು ಕೊಟ್ಟು ಮರಿಮಾಡುತ್ತವೆ. ವಿಶೇಷವಾಗಿ ಪುಕ್ಕಗಳಿಗೆ ಅಂಚುಗಳಿರುವುದರಿಂದ ಹಾರುವಾಗ ರೆಕ್ಕೆಯ ಶಬ್ದ ಮೂಡುವುದಿಲ್ಲ, ಇದರಿಂದಾಗಿ ಬೇಟೆಯನ್ನು ಸುಲಭವಾಗಿ ಹಿಡಿಯುತ್ತವೆ.



Eurasian Eagle Owl    Shivanahalli, 2011



# ಸಂಗೀತಗಾರ ಕೀಟ ಸಿಕಾಡ



ಏಪ್ರಿಲ್ ತಿಂಗಳ ಕೊನೆಯ ವಾರ. ಮುಂಗಾರು ಮಳೆಯ ಆಗಮನಕ್ಕಾಗಿ ದಟ್ಟವಾದ ಮೋಡಗಳು ಪೂರ್ವದ ಸಮುದ್ರದ ಕಡೆಯಿಂದ ಬಂದು ಸಕಲ ಕಾಡಿನ ಜೀವರಾಶಿಗಳಿಗೂ ಚೈತನ್ಯವನ್ನು ತಂದು, ಕೆರೆ ಹೊಳೆ ಹಳ್ಳಗಳನ್ನು ನೀರಿನಿಂದ ತುಂಬುವವು. ಅಲ್ಲೇ ನೆಲದ ಮೇಲೆ ಇದ್ದ ಲಂಟಾನ ಗಿಡದ ಬುಡದಲ್ಲಿ ಗೂಡುಕಟ್ಟಿ ಮೂರು ಮರಿ ಮಾಡಿದ್ದ ಮಡಿವಾಳ ಹಕ್ಕಿ ತನ್ನ ಮರಿಗಳಿಗೆ ಕುಟುಕು ನೀಡಲು ಯಾವುದೋ ಉಳವನ್ನು ಕಚ್ಚಿ ತಂದು ಬೇಲಿಯ ಮೇಲೆ ಕುಳಿತಿದೆ. ಬಿಸಿಲಿನ ದಗೆಗೆ ಮನೆಯಲ್ಲಿ ಪ್ಯಾನುಗಳು ಜೊರ್ರನೆ ರಾತ್ರಿಯೆಲ್ಲಾ ತಿರುಗುತ್ತವೆ. “ ಹಾಳ್ ಮಳೆ ಬಂದಿದ್ದು ಹೊರಟೋಯಿತು” ಎಂದು ಜಗುಲಿಯ ಮೇಲೆ ಆರಾಮವಾಗಿ ಮಲಗಿರುವ ಮುದುಕ ಗೊಣಗುತ್ತಾ ಹೆಗಲ ಮೇಲಿನ ಟವಲ್ಲಿನಲ್ಲೇ ಗಾಳಿ ಬೀಸಿಕೊಂಡು ಉಸ್ಸ್S ಎನ್ನುತ್ತಾನೆ.

ಮಳೆ ಬಂದು , ಭೂಮಿ ತಾಯಿ ತ್ಯಾಮವಾಗಿ , ಆ ಮಣ್ಣಿನ ವಾಸನೆ ಎಲ್ಲರ ಶ್ವಾಸಕೋಶಗಳಿಗೂ ತುಂಬಿ, ಆ ತ್ಯಾಮದ ಮಣ್ಣಿನಲ್ಲಿ ಕಳೆದ ವರ್ಷದಿಂದಲೂ ಮುಸುಕಾಕಿ ಮಲಗಿದ್ದ ಕಪ್ಪೆ ಕೀಟಾದಿ ಜೀವಿಗಳಿಗೆ ಜೀವ ಎಚ್ಚೆತ್ತು, ಕಣ್ಣು ಬಿಟ್ಟು , ಮಣ್ಣಿಂದ ಅಣಬೆಗಳು ಎದ್ದಂಗೆ ಎದ್ದು ಹೊರಬರುತ್ತವೆ. ಹಕ್ಕಿಗಳ ಕಲರವವನ್ನು ಬಿಟ್ಟರೆ ಉಳಿದ ಮೌನ ನಿಮ್ಮನ್ನೇ ಕಿತ್ತುತಿನ್ನುತ್ತದೆ. ಮನದ ಜೊತೆ ಮಾತಾಡಲು ಇದು ತಕ್ಕ ಸಮಯ .



ನಿಶಬ್ದವಾದ ಪ್ರಕೃತಿಯ ಜಾಗದಲ್ಲಿ ಕುಳಿತು ಓದುವುದು ನನ್ನ ಹವ್ಯಾಸ. ಅದಕ್ಕೋಸ್ಕರ ಹಲವು ಬ್ಯಾರಿ ವಿಶಾಲವಾದ ಬೆಟ್ಟಕ್ಕೋ , ಆಲದ ಮರದ ಕೆಳಗೋ ಕುಳಿತು ಓದಿದ್ದೇನೆ. ಓದು ಸಾಕಾಗಿ ಹಾಗೇ ಕಾಲುಚಾಚಿ ಮಲಗಿ ಕಣ್ತುಂಬಾ ನಿದ್ರಿಸಿದ್ದೇನೆ.

ಹೀಗೇ ಒಮ್ಮೆ ಕಾಡುದಾರಿಯ ಹೊಂಗೆ ಮರದ ಕೆಳಗೆ ಮಲಗಿ ನಿದ್ರಿಸುತ್ತಿದ್ದ ನನ್ನನ್ನು ಕುರಿಕಾಯುವ ಮುದುಕ ಕೂಗಿ ಎಬ್ಬರಿಸಿ “ ಇಂಗೆ ಒಬ್ಬೊಬ್ಬರೇ ಮಲ್ಕೊಂಡ್ ಬುಟ್ರೇ ಸೀಳುನಾಯಿಗಳು ಬಂದು ಸಿಗದಾಕಿ ಬಿಟ್ರೆ ಎನ್ ಮಾಡ್ತೀರಾ ?” ಹಿಂಗೆಲ್ಲಾ ಮಲ್ಕ್ಕೋ ಬೇಡಿ ಎಂದು



ಎಚ್ಚರಿಸಿದ್ದಾನೆ. ಸುಖವಾಗಿ ನಿದ್ರಿಸುವವರನ್ನು ಕಂಡರೆ ಎಲ್ಲರಿಗೂ ಹೊಟ್ಟೆಕಿಚ್ಚು! ನಮ್ಮದೋ ಕುಂಬಕರ್ಣನ ವಂಶ.!


ಅಂದು ಮರದ ಮೇಲೆ ಕುಳಿತ ಯಾವುದೋ ಕೀಟ ರಾಗಾಲಾಪನೇ ಶುರು ಮಾಡಿದೆ . ಆ ಕರ್ಣ ಕಠೋರ ಸ್ವರವನ್ನು ಕೇಳಿ ನನಗೆ ಜಗ್ಗನೆ ಎಚ್ಚರವಾಗಿದೆ. ಕೀಟಗಳು ಶಬ್ದಗೈಯುತ್ತವೆ ಎಂಬುದು ಗೊತ್ತಿತ್ತು. ಸೊಳ್ಳೆಗಳು ಕಿವಿಯ ಬಳಿ ಬಂದು ಸುಮಧುರವಾದ ಗಾನ ಗೈಯುವುದಿಲ್ಲವೇ! ?

ಆದರೆ ಈ ಸಿಕಾಡಾದಸ್ಟು ಕಠೋರವಾಗಿ ಬಹುಕಾಲ ಕಿರಲುವ ಕೀಟ ಇನ್ನೊಂದಿಲ್ಲ. ನನ್ನ ನಿದ್ದೆಯನ್ನು ಹಾಳು ಮಾಡಿದ ಈ ಕೀಟದ ಗಾನಕ್ಕೆ ಮನಸೋತು ಅದು ಯಾವ ಕೀಟವೆಂದು ತಿಳಿಯಲು ಕುತೂಹಲವಾಗಿ ಆ ಶಬ್ದ ಬರುತ್ತಿದ್ದ ದಿಕ್ಕಿಗೆ , ಕಣ್ಣಾಡಿಸಿದೆ. ಒಂದು ಸಣ್ಣ ಗಂದದ ಮರದ ಬುಡದಿಂದ ಝೋಂsss ಎಂಬ ಕಿರುಲು ಶಬ್ದ ಬರುತ್ತಿತ್ತು. ಆದರೆ ಆ ಸದ್ದುಂಟು ಮಾಡುತಿರುವ ಜೀವಿ ಮಾತ್ರ ಕಾಣುತ್ತಿಲ್ಲ!

ಸೂಕ್ಷ್ಮವಾಗಿ ಗಮನಿಸಿದರೆ ಆ ಮರದ ಕಾಂಡದ ಮೇಲೆ ಆರು ಕಾಲಿನ ವಿಚಿತ್ರ ಕೀಟವೋಂದು ತಲೆಯನ್ನು ಆಕಾಶದ ದಿಕ್ಕಿಗೆ ಮುಖಮಾಡಿ ಕುಳಿತಿದೆ. ಆದರೆ ಅದು ಏನು ಶಬ್ದ ಮಾಡುತ್ತಿಲ್ಲ . ಹತ್ತಿರದಿಂದ ಗಮನಿಸಿದಾಗ ಅದು ಕೀಟವಲ್ಲಾ ಯಾವೂದೋ ಕೀಟ ಪೊರೆ ಬಿಟ್ಟು ಹೋಗಿರುವ ಹೊರಕವಚದ ಚಿಪ್ಪು ಆಗಿತ್ತು.

ಸ್ವಲ್ಪ ದೂರದಲ್ಲೇ ರೆಂಬೆಯ ಮೇಲೆ ಕುಳಿತ ಆರು ಕಾಲಿರುವ ಕೀಟ ಅದರ ಗಾತ್ರಕ್ಕೆ ಮೀರಿದ ಶಬ್ದವನ್ನು ಹೊಮ್ಮಿಸುತ್ತಿದೆ.

ಈ ಕೀಟದ ಜೀವನ ಶೈಲಿಯಂತು ಇನ್ನೂ ವಿಚಿತ್ರ . ಹದಿಮೂರು ವರ್ಷಗಳ ಕಾಲ ನೆಲದೊಳಗೆ ಮಣ್ಣಿನಲ್ಲಿ ಹುದುಗಿದ್ದು, ಆ ಗಿಡದ ಬೇರಿಗೆ ತೂತ ಮಾಡಿ ಅದರಿಂದ ಬರುವ ಜೀವ ರಸವನ್ನು ಹೀರಿ ಕುಡಿದು ಅಲ್ಲೇ ಬೆಳೆದು ದೊಡ್ಡದಾಗಿ ಪ್ರಾಯಕ್ಕೆ ಬಂದಾಗ ಭೂಮಿಯನ್ನು ಸೀಳಿ ಮೇಲೆ ಬರುತ್ತದೆ . ಈ ರೀತಿ ಭೂಮಿಯಿಂದ ಹೊರ ಬಂದಗ ಅವಕ್ಕೆ ಹಾರಲು ರೆಕ್ಕೆಗಳೂ ಇರುವುದಿಲ್ಲ. ಸದ್ದೂ ಮಾಡುವುದಿಲ್ಲಾ!. . ಭೂಮಿಯ ಮೇಲೆ



ಬಂದ ಸ್ವಲ್ಪ ಸಮಯದಲ್ಲೇ ತನ್ನ ಬೆನ್ನನ್ನು ತಾನೇ ಸೀಳಿಕೊಂಡು ತನ್ನ ಹೊರ ಕವಚವನ್ನು ತಾನೇ ಕಳಚಿ ಹಾಕಿ ಹೊರಬಂದಾಗ ಅದಕ್ಕೆ ಮಿರಿಮಿರಿ ಮಿನುಗುವ ಹೊಸ ರೆಕ್ಕೆಗಳಿರುತ್ತವೆ. ಹಾರಲು ರೆಕ್ಕೆ ಪಡೆದ ಕೀಟ ಎಲ್ಲಾದರು ಎತ್ತರದ ಜಾಗದಲ್ಲಿ ಕುಳಿತು ತನ್ನ ಸಂಗತಿಗಳನ್ನು ಕೂಗಿ ಕರೆಯಲು ಶುರು ಮಾಡುತ್ತವೆ . ಸಾಮಾನ್ಯವಾಗಿ ಎಲ್ಲಾ ಗಂಡು -ಹೆಣ್ಣು ಸಿಕಾಡಾಗಳು ಒಮ್ಮೆಲೇ ಹೊರಬರುವುದರಿಂದ ಮುಂಗಾರಿನಲ್ಲಿ ಇವುಗಳ ಕೂಗಾಟ ಜೋರಾಗಿರುತ್ತದೆ.ಯಾವುದಾದರೂ ಮರದ ಕೊಂಬೆಯ ಮೇಲೆ ಕುಳಿತು ಆ ಕೊಂಬೆಗೆ ತೂತು ಕೊರೆದು ಜೀವರಸವನ್ನು ಹೀರಿ ಜೀರ್ಣಿಸಿಕೊಂಡು ಉಳಿದ ರಸವನ್ನು ಪಿಚಕಾರಿಯಂತೆ ಒಂದಾಮಾಡಿ ಹೊರಹಾಕುತ್ತದೆ. ಮತ್ತು ಅದು ಸಿಹಿಯಾಗಿರುತ್ತದೆ!

ಸಿಕಾಡಗಳು ಶಬ್ದ ಮಾಡಲು ಬಳಸುವ ವಿಧಾನವೂ ವಿಚಿತ್ರ!. ನಿಜವಾಗಿಯೂ ಇವು ಕೂಗಿ ಕರೆಯುವುದೇ ಇಲ್ಲ. ಬದಲಾಗಿ ತನ್ನ  ಬೆನ್ನ ಮೇಲೆ ಇರುವ ಗಟ್ಟಿಯಾದ ಪದರವನ್ನು ಬಹು ವೇಗವಾಗಿ ಕಂಪಿಸುವಂತೆ ಮಾಡಿ ಶಬ್ದವನ್ನು ಉಂಟುಮಾಡುತ್ತವೆ. ಕಬ್ಬಿಣದ ತಗಡನ್ನು ಬಗ್ಗಿಸಿ ತಕ್ಷಣ ಬಿಟ್ಟಾಗ ಲೊಟ್ ಲೊಟ್ ಎಂದು ಶಬ್ದ ಮಾಡುವುದಿಲ್ಲವೇ ಅದೇ ರೀತಿ ಮೈ ಮೇಲಿನ ವಿಷೇಶವಾದ ಚರ್ಮವನ್ನು ಲೊಟ್ ಲೊಟ್ ಎನ್ನಿಸಿ ವೇಗವಾಗಿ ಕಂಪಿಸಿ ಶಬ್ದ ಉಂಟು ಮಾಡುತ್ತವೆ. ಸಿಕಾಡಗಳ ಶಬ್ದವನ್ನು ಕೇಳಿಸಿಕೊಂಡು, ಅವು ಇರುವ ಜಾಗವನ್ನು ಪತ್ತೆಹಚ್ಚಿ ಹಿಡಿದು ತಿನ್ನುವುದರಲ್ಲಿ ಕಾಜಾಣ ಹಕ್ಕಿಗಳು ಬಹಳ ಪರದಾಡಬೇಕಾಗುತ್ತದೆ .


ಒಂದು ಸಿಕಾಡಾ ಕಿರ್ರೋ ಅಂದರೆ ಸಾಕು ಎಲ್ಲಿಂದಲೋ ಎಲ್ಲಾ ಒಟ್ಟಿಗೆ ಕಿರುಚಲು ಶುರು ಮಾಡಿ ಬಿಡುತ್ತವೆ ತಾರಕ ಸ್ವರ !. ಇಡೀ ಕಾಡೇ ಯಾವುದೋ ಒಂದು ದೊಡ್ಡ ಯಂತ್ರದಂತೆ ಕಿರ್ ಎಂದು ಕಿರುಚಿದಂತೆ ಬಾಸವಾಗುತ್ತದೆ.

ಹೆಚ್ಚು ಕಾಲ ಬಹಳ ಹತ್ತಿರದಿಂದ ಆ ಸಿಕಾಡದ ರಾಗಾಲಾಪನೆಯನ್ನು ಆಲಿಸಿದರೆ ನಿಮ್ಮ ಕಿವಿಗೆ ನೋವಾಗಿ ಡ್ಯಾಮೇಜ್ ಆಗಬಹುದು!. ಬಹಳ ಕಾಲ ಈ ಸಿಕಾಡ ಸಂಗೀತವನ್ನು ಕೇಳಿದರೆ ತಲೆ ನೋವು ಬರುವುದಂತೂ ಖಂಡಿತ. ವರ್ಷದ ಏಪ್ರಿಲ್- ಮೇ ತಿಂಗಳಲ್ಲಿ ಮಾತ್ರ ಕಾಣ ಸಿಗುವ ಈ ಸಿಕಾಡಗಳು ಒಂದೆರಡು ವಾರದ ವರಿಗೂ ಕಿರ್ರೋ ಎಂದು ಕೂಗಿ ತನ್ನ ಹೊಸ ಹೊಸಆತುಗಳನ್ನು ಸ್ಥಾಪಿಸಿ ಮಾಯವಾಗಿ ಬಿಡುತ್ತದೆ. ಮುಂದೆ ಹದಿಮೂರು ವರ್ಷಗಳ ಕಾಲ ಇದರ ಮಕ್ಕಳು ಯಾವುದೋ ಗಿಡದ ಬೇರಿಗೆ ಜೋತು ಬಿದ್ದು ಅಲ್ಲೇ ಜೀವರಸವನ್ನು ಸವಿಯುತ್ತಾ ತಮ್ಮ ಅಜ್ಞಾತ ವಾಸವನ್ನು ಶುರು ಮಾಡುತ್ತವೆ.





# ಬುಗರಿಕಲ್



ರಾಗಿಹಳ್ಳಿ ಸ್ಟೇಟ್ ಫಾರೆಸ್ಟಿನ ದಕ್ಷಿಣಭಾಗದಲ್ಲಿ ಬುಗರಿಕಲ್ ಎಂಬ ಬೆಟ್ಟವಿದೆ. ಅದರ ಮೇಲೆ ಒಂದು ವಾಚ್ ಟವರ್ ಇದೆ. ಆ ಎತ್ತರವಾದ ವಾಚ್ಟವರ್ನ ಮೇಲೆ ಏರಿ ನೋಡಿದರೆ ವಿಶಾಲವಾದ ಕಾಡಿನ ರಾಶಿ ಕಣ್ಣಿಗೆ ಬೀಳುತ್ತದೆ. ದೂರದಲ್ಲಿ ಎರಡು ಕೆರೆಗಳೂ ಕಾಣುತ್ತವೆ. ನಮ್ಮ ಲೋಕಲ್ ಡ್ರೈವರ್ ಆದ ಮಹದೇವುರವರನ್ನು ಕೂಡಿ ಗಾಡಿಯಲ್ಲಿ ಬುಗರಿಕಲ್ ಬೆಟ್ಟಕ್ಕೆ ಹೊರಟೆವು. ಕಾಡಿನ ಆ ಕಚ್ಚ ರಸ್ತೆಯಲ್ಲಿ ನಮ್ಮ ಜೀಪ್ ನಿಧಾನಗತಿಯಲ್ಲಿ ಸಾಗಿತ್ತು, ದಾರಿಯ ಎರಡು ಪಕ್ಕದಲ್ಲಿ ಬೇಸಿಗೆಗೆ ಎಲೆಯುದಿರಿಸಿ ಬೋಳಾಗಿ ನಿಂತ ಮರಗಳು ಕಂಡವು. ಮಹದೇವು ಹೇಳಿದಂತೆಯೇ ರೋಡಿನ ಪಕ್ಕದಲ್ಲಿ ಯಾವುದೇ ಪ್ರಾಣಿಗಳು ನಮಗೆ ಕಾಣಸಿಗಲಿಲ್ಲ. ನಮ್ಮ ಗಾಡಿ ಬೆಟ್ಟದ ಬುಡದಲ್ಲಿರುವ ಕೆರೆಯ ಬಳಿ ತಲುಪಿತು. ಆ ಕೆರೆಯೇನೋ ಚಿಕ್ಕದೆ. ಅದರಲ್ಲಿ ಸ್ವಲ್ಪವೇ ನೀರಿತ್ತು. ಪಶ್ಚಿಮದಲ್ಲಿ ಸೂರ್ಯ ಮುಳುಗುತ್ತಿದ್ದ. ಸಂಜೆಯ ಹೊತ್ತು ನೀರವ ಮೌನದಲ್ಲಿ ಕೆರೆಯ ಪಕ್ಕದಲ್ಲೇ ಗಾಡಿಯನ್ನು ನಿಲ್ಲಿಸಿ ಮಾತಾಡದೆ ಒಳಗೆ ಕುಳಿತೆವು ಎಷ್ಟೋತ್ತು ಕಾದರೂ ಯಾವ ಪ್ರಾಣಿಯೂ ಕೆರೆಯ ಬಳಿ ಸುಳಿಯಲಿಲ್ಲ. ದೂರದಲ್ಲಿ ಯಾವುದೋ ಕಾಡು ಕೋಳಿ ತೆಕೋ. . ತೆಕ್ ತೆಕ್. . ತೆಕೋ ತೆಕ್ ತೆಕ್ . . . . ಎಂದು ಕೂಗುತ್ತಿತ್ತು . ಆ ಮೌನದಲ್ಲಿ ಪಕ್ಷಿಗಳ ಕಲರವ ಕೇಳುತ್ತಿತ್ತು. ನಾವು ಎಷ್ಟು ಮೌನವಾಗಿ ಕುಳಿತಿದ್ದೆವೆಂದರೆ ಪಕ್ಕದಲ್ಲಿ ಕುಳಿತವರ ಉಸಿರಾಟವನ್ನೂ ಆಲಿಸಬಹುದಿತ್ತು ಅಂತಹ ಮೌನ. ಕೆರೆಯ ನೀರಿನ ದಡದ ಮೇಲೆ ನೆಟ್ಟ ಕಣ್ಣ ದೃಷ್ಟಿ.

ಎಲ್ಲೋ ದೂರದಲ್ಲಿ ಉತ್ತುತ್ತಿಯ ರಾಗಾಲಾಪನೆ. ಸ್ವಲ್ಪ ಹೊತ್ತಿನಲ್ಲೇ ಎಲ್ಲರೂ ನಿಶಬ್ಧವಾಗಿ ಯಾವುದಾದರೂ ಪ್ರಾಣಿ ಕಣ್ಣಿಗೆ ಕಾಣಸಿಗಬಹುದೇ ಎಂದು ಸುಮಾರು ಹದಿನೈದು ನಿಮಿಷಗಳ ಕಾಲ ಕಾದುಕುಳಿತೆವು. ಸಂಜೆಯ ಬೆಳಕು ಸ್ವಲ್ಪ ಸ್ವಲ್ಪವೇ ಕಡಿಮೆಯಾಗಿ ಕತ್ತಲು ಆವರಿಸುತ್ತಿತ್ತು.



"ಅಲ್ಲಿ ಏನೋ ಕರ್‍ರಗೆ ಬರ್ತಾ ಇದ್ದಂಗೆ ಅಯ್ತೆ" ಎಂದು ಹಿಂದೇ ಸೀಟಿನಲ್ಲಿದ್ದ ಮಹೇಶ ಜೋರಾಗಿಯೇ ಹೇಳಿಬಿಟ್ಟ. ಬಾಯಿಯ ಮೇಲೆ ಬೆರಳಿಟ್ಟು ಶ್ ಎಂದು ಸುಮ್ಮನಿರುವಂತೆ ಹೇಳಿದೆ. ಯಾವುದೇ ಬೀತಿಯಿಲ್ಲದೆ ಆರಾಮವಾಗಿ ನಡೆಯುತ್ತಾ ಆರು ಕಾಟಿ ಎರಡು ಮರಿಗಳು ಸ್ವಚ್ಛಂದವಾಗಿ ಬಂದು ನಮ್ಮ ಮುಂದೆಯೇ ದಣಿವಾರುವವರೆಗೂ ನೀರು ಕೂಡಿದವು. ಎಲ್ಲರಿಗೂ ಕಾಟಿಗಳನ್ನು ನೋಡಿ ಖುಷಿಯಾಯಿತು ನಮ್ಮ ಕಾಡಿನಲ್ಲೂ ಕಾಟಿಗಳನ್ನು ಕಂಡು ಮಹದಾನಂದವಾಯಿತು!. ನೀರು ಕುಡಿದು ದಣಿವಾರಿಸಿಕೊಂಡ ಮೇಲೆ ಒಂದೊಂದೇ ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತಾ ಆ ಕಾಡು ದಾರಿಯಲ್ಲಿ ನಡೆದು, ಆ ಮಹಾ ಅರಣ್ಯದಲ್ಲಿ ಲೀನವಾಗಿಬಿಟ್ಟವು.



ಕರ್ನಾಟಕದ ಪಶ್ಚಿಮಘಟ್ಟದ ಉದ್ದಕ್ಕೂ ಕಾಣಸಿಗುವ ಈ ಕಾಟಿಗಳು ಸಂಘಜೀವಿಗಳು. ಒಂದು ಟನ್ ತೂಗುವ ಈ ಕಾಟಿಗಳ ಬಣ್ಣ ಕಪ್ಪು. ಗೂಳಿಗಳಿಗೆ ವಯಸ್ಸಾದಂತೆ ಅದರ ಮೈಬಣ್ಣ ಗಾಢ ಕಪ್ಪಾಗಿ ಮೈಮೇಲೆ ಕೂದಲುಗಳು ಇಲ್ಲವಾಗುತ್ತವೆ. ಇವುಗಳ ಮೊನಚಾದ ಕೊಂಬುಗಳು ಬಲಿಷ್ಠವಾದವು.

ಕಿವಿ ಮತ್ತು ವಾಸನೆ ಹಿಡಿಯುವ ಸಾಮರ್ಥ್ಯ ಬಹಳ ಸೂಕ್ಷ್ಮ  ಇವುಗಳಿಗೆ ಕಣ್ಣಿನ ದೃಷ್ಟಿ ಕಡಿಮೆ ಹುಲ್ಲುಗಾವಲು ಮತ್ತು ದಟ್ಟ ಅರಣ್ಯಗಳಲ್ಲಿ ಹಿಂಡು ಹಿಂಡಾಗಿ ಕಾಣಸಿಗುವ  ಕಾಟಿಗಳು ಬಹಳ ಉಗ್ರವಾಗಿ ಕಂಡರೂ ಪುಕ್ಕಲು ಜೀವಿಗಳು. ತಾವಾಗಿಯೇ ಎಂದು ಮೈಮೇಲೆ ಬೀಳುವುದಿಲ್ಲ. ಹುಲಿ, ಚಿರತೆ ,ಕಾಡುನಾಯಿಗಳಿಂದ ಅಪಾಯಕಾರಿ ಗಂಡಾಂತರ ಒದಗಿದಲ್ಲಿ ಹಿಂಡಿನಲ್ಲಿರುವ ಎಲ್ಲಾ ಪ್ರಾಣಿಗಳು ಕರುಗಳನ್ನು ನಡುವೆ ಸೇರಿಸಿ ಸುತ್ತುವರಿದು ರಕ್ಷಿಸುತ್ತವೆ.

ಈ ಅಪೂರ್ವ ಜೀವಿಗಳನ್ನು ನಾಗರಹೊಳೆ ಬಂಡೀಪುರಗಳಲ್ಲಿ ಹೇರಳವಾಗಿ ಕಾಣಬಹುದು.


ಕಾಡಿನಲ್ಲೇ ಕಾಟಿಗಳನ್ನು ನೋಡುತ್ತಾ ಕತ್ತಲಾಗಿಬಿಟ್ಟಿತು.  ವಾಪಸ್ಸು ಕಾಡಿಂದ ಆಚೆ ಬರುವ ದಾರಿಗೆ ಅಡ್ಡಲಾಗಿ ಮೂರ್ನಾಲ್ಕು ಜಿಂಕೆಗಳು ಜೀಪಿನ  ಮುಂದೆಯೇ ಛಂಗನೆ ಎಗರಿ ಮಾಯವಾದವು ಎಲ್ಲರೂ ಕಾಡು ಮೃಗಗಳನ್ನು ಕಂಡ ಖುಷಿಯಲ್ಲಿದ್ದರೆ  ‘‘ ಅಯ್ಯೋ ಇವತ್ತು ಕ್ಯಾಮರ  ತರಬೇಕಿತ್ತು  ‘‘ ಎಂದು ತಮ್ಮ D S L R ಕ್ಯಾಮರವನ್ನು ಮನೆಯಲ್ಲಿ ಬಿಟ್ಟು ಬಂದಿದ್ದ ಶಂಕರಪ್ಪನವರು ಬೇಜಾರಿನಿಂದ ನನ್ನ ಕಡೆ ನೋಡಿ ತಲೆಯಾಡಿಸಿದರು.





# ವಿದ್ಯಾರ್ಥಿಗಾಗಿ ವಿಜ್ಞಾನ

## * ಹಾಲೋಬೇಟ್ ರಂಗೋಲಿ ಹುಳ



ಅನೇಕ ವರ್ಷಗಳಿಂದ ಮನುಷ್ಯ ಪರಿಸರವನ್ನು ಕದಡುತ್ತಾ ಬಂದಿದ್ದಾನೆ. ಕೀಟಗಳ ವಿಷಯದಲ್ಲಿ ಹತ್ತಾರು ಉದಾಹರಣೆಗಳಿವೆ. ಸೊಳ್ಳೆ ಕಾಟದಿಂದ ತಪ್ಪಿಸಿಕೊಳ್ಳಲು ಡಿ.ಡಿ.ಟಿ ಸಿಂಪಡಿಸಿದರೆ ಸೊಳ್ಳೆಗಳೇನೋ ಸತ್ತವು ಆದರೆ ಕ್ರಮೇಣ ಅದು ನಮ್ಮ ಮಕ್ಕಳನ್ನೇ ಬಲಿ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಯಿತೇ ಹೊರತು ಸೊಳ್ಳೆಗಳು ಅದಕ್ಕೆ ಒಗ್ಗಿಕೊಂಡವು. ಮನುಷ್ಯನ ಉಗಮವಾದ ಮೇಲೆ ಕೀಟ ಜಾತಿಯ ಒಂದನ್ನು ಸಹ ನಿರ್ನಾಮ ಮಾಡಲಾಗಲಿಲ್ಲ. ಇದಕ್ಕೆ ಕಾರಣ ಅವುಗಳ ಒಗ್ಗುವಿಕೆ.

ಸಮುದ್ರ ಮಧ್ಯೆ ಹಡಗೊಂದು ಮುರಿದು ಬಿದ್ದರೆ ನಮ್ಮ ಸಹಾಯಕ್ಕೆ ಬರುವುದು ಮುರಿದು ಬಿದ್ದ ಮರದ ತುಂಡುಗಳು. ಸಮುದ್ರದಲ್ಲಿ ಅನೇಕ ಬೇಡವಾದ ವಸ್ತುಗಳಿರುತ್ತವೆ. ಅವುಗಳಲ್ಲಿ ಹಡಗು ಮೇಲಿನಿಂದ ನೋಡಿದರೆ ಕಣ್ಣಿಗೆ ಕಾಣದಂತ ಪಾಪ್ ಕಾರ್ನ್ ಗಾತ್ರದ ಥರ್ಮಕೋಲ್ ತುಂಡುಗಳು. ಗೋಲ್ಡ್ ಸ್ಟೀನ್ ಎಂಬ ವಿಜ್ಞಾನಿ ಆಕಸ್ಮಿಕವಾಗಿ ಈ ತುಂಡುಗಳನ್ನು ಗಮನಿಸಿದಾಗ ಅವುಗಳ ಮೇಲೆ ಮೊಟ್ಟೆಗಳಿರುವುದು ಕಂಡಿತು. ಹೆಚ್ಚಿನ ಅಧ್ಯಯನ ಮಾಡಿದಾಗ ಅವುಗಳು ಹಾಲೋಬೇಟ್ ಎಂಬ ರಂಗೋಲಿ ಹುಳ ರೀತಿಯ ಕೀಟದ್ದು ಎಂದು ತಿಳಿಯಿತು. ಇವುಗಳ ಜೀವನ ಪೂರ್ತಿ ನೀರಲ್ಲೇ ಇದ್ದರೂ ಮೊಟ್ಟೆಯಿಡಲು ಯಾವುದಾದರೂ ಘನ ವಸ್ತುವೇ ಬೇಕು. ಹಿಂದಿನ ಕಾಲದಲ್ಲಿ ಜ್ವಾಲಾಮುಖಿಯ ತಂಪಾದ ಕಲ್ಲುಗಳ ಮೇಲೆ ಇಡುತ್ತಿದ್ದವಂತೆ. ಈಗ ಈ ತರಹದ ಪ್ಲಾಸ್ಟಿಕ್ ರೀತಿಯ ನೀರಿನಲ್ಲಿ ತೇಲುವ ತ್ಯಾಜ್ಯಗಳನ್ನು

ಸಮುದ್ರದಕ್ಕೆ ಮಾನವರು ಹೆಚ್ಚಾಗಿ ಸುರಿಯುತ್ತಿದ್ದಾರೆ. ಈ ತೇಲಾಡುವ ತ್ಯಾಜ್ಯದ ಮೇಲೆ ಹಾಲೋಬೇಟ್ ಹುಳಗಳು ಮೊಟ್ಟೆಗಳನ್ನು ಬಹಳವಾಗಿ ಇಡುತ್ತಿದ್ದು, ಮುಂದೆ ಹಾಲೋಬೇಟ್ ಕೀಟಗಳ ಸಂಖ್ಯಾಸ್ಫೋಟವಾಗುವ ಭೀತಿ ಇದೆ. ಇದರಿಂದ ಸಮುದ್ರದ ಜೀವ ಆವಾಸದಲ್ಲಿ ಏರುಪೇರಾಗುವುದಂತೂ ಖಂಡಿತ.

## ಕೆಟ್ಟ (ಕೀಟ) ನೋಟ

ಭೂತ ಗಾಜ ಕೆಳಗಡೆ ಕ್ರಿಮಿಯನ್ನಿರಿಸಿ ನೋಡಿದೆ

ಭೂತ ರಾಜ ಒಳಗಡೆ, ನೂರು ಸಾಲು ಹಲ್ಲಿದೆ

ಇರುವುದೊಂದು ಕಾಣುವುದೊಂದು, ಕೀಟವೊಂದು ಬಣ್ಣ ಹಲವು

ನೋಡುತ ಜಿಂಭೆಯ ಜಂಭ, ಮಾಡಬೇಕೇ ಅದರ ಬಗ್ಗೆ ಒಲವು

ಒಳಗೆ ತೂರಿ ಕೆಳಗೆ ಜಾರಿ ಜೀವ ಹೀರಿ ಬೆಳೆಸಿದವಗೆ ಮಾರಕ!

ಎಂಥ ಕಟುಕ! ಏನು ರೂಪು! ನಯನ ಮನಮೋಹಕ!

ಅರರೆ! ಪರರ ನರರ ರಕ್ತವೇ, ತುಂಗೆ ಗಂಗೆ ಕೀಟಕೆ!

ವಸತಿ,ವಸನ,ಸ್ನಾನ,ಪಾನ ಎಲ್ಲ ನಾವೇ ಊಟಕೆ!

ಮೀಸೆ ತುತ್ತ ತುದಿಯಲಿ ರಂಗು ಬಡಿದ ಮುತ್ತಿದೆ!

ಸೂಜಿಯಂತೆ ನಾಲಿಗೆ, ಗೆಜ್ಜೆಯಂತೆ ಸುತ್ತಿದೆ!

ಪ್ರಕೃತಿ ವಿಕೃತಿ ನಾಟಕ

ಆಗದಿರಲಿ ಸೂತಕ

ಇದು ರಮ್ಯ

ಅನನ್ಯ







